**ಸಾಕ್ಷಿಯನ್ನು ದಿನಾಂಕಃ 24.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀ. ಬಿ ಎಸ್ ಎಸ್/ಡಿ ಸಿ ವಕೀಲರಿಂದಃ**

ನಾನು ಹತ್ತನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ವ್ಯವಹಾರದ ಜ್ಞಾನ ಇರುತ್ತದೆ ಎಂದರೆ ಸರಿ. ಪಿರ್ಯಾದಿ ಗಂಡ 2021-22 ನೇ ಸಾಲಿನಲ್ಲಿ ನಮ್ಮ ಮನೆಯನ್ನು ಕಟ್ಟಿಸುವ ಸಂಬಂಧ ಮನೆ ನಿರ್ಮಾಣದ ಗುತ್ತಿಗೆ ಪಡೆದ ಬಗ್ಗೆ ಯಾವುದೇ ಒಪ್ಪಂದ ಪತ್ರ ಮಾಡಿಕೊಂಡಿರುವುದಿಲ್ಲ. ನಾನು ಸದರಿ ಗುತ್ತಿಗೆ ಪ್ರಕಾರ ಅಂಗಡಿಯಲ್ಲಿ ಮನೆ ಕೆಲಸದ ಸಾಮ್ಹಾಗ್ರಿಗಳನ್ನು ನಾನೇ ಕೊಡಿಸಬೇಕೆ ಹೊರತು ಆ ಬಗ್ಗೆ ಪಿರ್ಯಾದಿಯ ಗಂಡನಿಗೆ ಚೆಕ್ ಅನ್ನು ನೀಡುವ ಅವಶ್ಯಕತೆ ಇರುವುದಿಲ್ಲ ಎಂದರೆ ಸಾಕ್ಷಿಯು ಅವರು ಭದ್ರತೆಗೆ ಚೆಕ್ ಅನ್ನು ನೀಡುವಂತೆ ತಿಳಿಸಿದ್ದರಿಂದ ನಾನು ಖಾಲಿ ಚೆಕ್ ಅನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸಿಮೆಂಟ್ ಅಂಗಡಿಯವರು ನನಗೆ ಪರಿಚಯ ಇರುವುದಿಲ್ಲ, ಪಿರ್ಯಾದಿಯ ಗಂಡ ನಾನೇ ಸಾಮುಗ್ರಿಗಳನ್ನು ತರುತ್ತೇನೆಂದು ಖಾಲಿ ಚೆಕ್ ಅನ್ನು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ರೂ.1,30,000/-ದ ಪ್ರೊನೋಟ್ ಅನ್ನು ಮಹಾದೇವಪ್ಪ ಎನ್ನುವ ವಕೀಲರ ಕಛೇರಿಯಲ್ಲಿ ಬರೆಯಲಾಗಿದೆ. ಸದರಿ ಪ್ರೊನೋಟ್ ನ ಮಾಡಿಸಲು ನಾನು ತಿಳಿಸಿದ್ದು ಸದರಿ ಪಿರ್ಯಾದಿ ಗಂಡ ನಾಗರಾಜು ರವರು ಅದನ್ನು ಮಾಡಿಸಿಕೊಂಡು ಬಂದಿರುತ್ತಾರೆ. ಸದರಿ ಪ್ರೊನೋಟ್ ಗೆ ಯಾರು ಸಾಕ್ಷಿದಾರರಾಗಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

ನಾನು ನಮ್ಮ ಮನೆಯನ್ನು ಹೆಚಿ ಡಿ ಕೋಟೆ ಪಟ್ಟಣದ ಡ್ರೈವರ್ ಕಾಲೋನಿಯಲ್ಲಿ ಕಟ್ಟಿಸಿರುತ್ತೇನೆ. ಆ ರೀತಿ ಮನೆ ಕಟ್ಟಿದ ಬಾಬ್ತು ಲೈಸನ್ಸ್ ಪಡೆದುಕೊಂಡ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಅಗತ್ಯವಿದ್ದಲ್ಲಿ ಹಾಜರುಪಡಿಸುವುದಾಗಿ ನುಡಿಯುತ್ತಾರೆ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಪಿರ್ಯಾದಿಯ ಗಂಡ ಕೋರೋನಾ ಸಮಯದಲ್ಲಿ 2 ಲಕ್ಷ ಮೌಲ್ಯದ ಸಾಮುಗ್ರಿಗಳನ್ನು ತೆಗೆದುಕೊಂಡು ಹೋದ ಬಗ್ಗೆ ಅಲ್ಲಿಂದ ಇಲ್ಲಿಯವರೆಗೆ ಆತನ ವಿರುದ್ಧ ಯಾವುದಾದರೂ ಕ್ರಮ ಜರುಗಿಸಿದ್ದೀರಾ ಎಂದರೆ ಸಾಕ್ಷಿಯು ಮನೆ ಕೆಲಸ ಮುಗಿಯುವ ಮೊದಲೇ ಅವರು ಗಲಾಟೆ ಮಾಡಿ ಚೆಕ್ ಬೌನ್ಸ್ ಮಾಡಿರುತ್ತಾರೆಂದು ನುಡಿಯುತ್ತಾರೆ. ನಾನು ಸದರಿ ನಾಗರಾಜು ರವರಲ್ಲಿ ನನ್ನಿಂದ ಪಡೆದ ಚೆಕ್, ಡಿಮಾಂಡ್ ಪ್ರೊನೋಟ್ ಹಾಗೂ 2 ಲಕ್ಷ ಮೌಲ್ಯದ ಸಾಮುಗ್ರಿ ತೆಗೆದುಕೊಂಡ ಹೋದ ಬಗ್ಗೆ ಹಣವನ್ನು ಕೊಡುವಂತೆ ತಿಳಿಸಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಾನು ಅವುಗಳನ್ನ ಹಿಂತಿರುಗಿಸುವಂತೆ ಯಾವಾಗ ಹೇಳಿರುತ್ತೇನೆಂದು ನನಗೆ ಈಗ ನೆನಪಿರುವುದಿಲ್ಲ. ಆ ರೀತಿ ನಾಗರಾಜು ನನ್ನಿಂದ ಪಡೆದ ಚೆಕ್, ಡಿಮಾಂಡ್ ಪ್ರೊನೋಟ್ ಹಾಗೂ 2 ಲಕ್ಷ ಮೌಲ್ಯದ ಸಾಮುಗ್ರಿ ತೆಗೆದುಕೊಂಡ ಹೋದ ಬಗ್ಗೆ ಹಣವನ್ನು ಹಿಂತಿರುಗಿಸದ ಬಗ್ಗೆ ನಾನು ಅವರ ವಿರುದ್ಧ ಪೋಲಿಸ್ ಠಾಣೆಗೆ ದೂರನ್ನು ನೀಡಲು ಹೋಗಿದ್ದು ಅಲ್ಲಿ ಪೋಲಿಸರು ರಾಜಿ ಮಾಡಿಕೊಳ್ಳುವಂತೆ ಸೂಚಿಸಿ ಹಿಂದಕ್ಕೆ ಕಳುಹಿಸಿರುತ್ತಾರೆ.

ನಿಪಿ-1 ರಲ್ಲಿರುವ ನಿಪಿ-1(ಎ) ಸಹಿ ನನ್ನದೇ ಆಗಿರುತ್ತದೆ. ಸದರಿ ಚೆಕ್ಕಿನ ದಿನಾಂಕ 07.11.2020 ಆಗಿರುತ್ತದೆ. ನಾನು ಪಿರ್ಯಾದಿ ಗಂಡನಾದ ನಾಗರಾಜು ರವರಿಗೆ 2021-22 ನೇ ಸಾಲಿನಲ್ಲಿ ಮನೆ ಕಟ್ಟುವ ಗುತ್ತಿಗೆ ಕೊಟ್ಟಿರುವುದಾಗಿ ಸುಳ್ಳು ಹೇಳಿದ್ದು 2020 ನೇ ಇಸವಿಯಲ್ಲಿ ಈ ಚೆಕ್ ಬೌನ್ಸ್ ಪ್ರಕರಣ ಆಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 20.11.2020 ರಂದು ಪಿರ್ಯಾದಿಯು ನಾನು ನೀಡಿದ ಚೆಕ್ ಅಮಾನ್ಯಗೊಂಡಿರುವುದಾಗಿ ನನಗೆ ನೋಟಿಸ್ ಅನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟಿಸಿಗೆ ಉತ್ತರ ಕೊಟ್ಟಿದ್ದೇನೋ ಇಲ್ಲವೋ ಎಂದು ಗೊತ್ತಿರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಸಂಗಮೇಶ್ವರ ವಕೀಲರ ಕಛೇರಿಯಲ್ಲಿ ರೂ.1,80,000/- ಕ್ಕೆ ರಾಜಿ ಮಾತುಕತೆಯಗಿರುವುದಾಗಿ ತಿಳಿಸಿದ್ದು ಆ ಬಗ್ಗೆ ದಾಖಲೆ ಇದೆಯೇ ಎಂದರೆ ಸಾಕ್ಷಿಯು ಅದು ಚಂದಪ್ಪ ವಕೀಲರ ಬಳಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ರಾಜಿ ಮಾತುಕತೆ ಯಾವ ದಿನಾಂಕ, ತಿಂಗಳು ಹಾಗೂ ವರ್ಷ ಆಗಿದೆ ಎಂದು ನೆನಪಿರುವುದಿಲ್ಲ. ಆ ರೀತಿ ರಾಜಿಯಂತೆ ನಾಗರಾಜು ರವರಿಗೆ ರೂ.1,80,000/- ನಾಲ್ಕು ಕಂತುಗಳಲ್ಲಿ ನೀಡಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಸಾಕ್ಷಿ ಮುಂದುವರೆ ಅವೆಲ್ಲವನ್ನೂ ನಗದಾಗಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ಅವರು ಹಣ ಪಡೆದ ಬಗ್ಗೆ ಯಾವುದೇ ರಶೀದಿ ನೀಡಿರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಎಲ್ಲ ಅಂಶಗಳು ಕಟ್ಟು ಕತೆಯಾಗಿದ್ದು ಅಲ್ಲಿ ತಿಳಿಸಿರುವ ಎಲ್ಲ ಅಂಶ ಸತ್ಯಕ್ಕೆ ದೂರಿವಾಗಿದೆ ಎಂದರೆ ಸರಿಯಲ್ಲ. ನಾನು ಸದರಿ ನಾಗರಾಜು ರವರಿಗೆ ಹಣ ಕೊಟ್ಟ ನಂತರ ಅವರು ನನಗೆ ಚೆಕ್ಕು ಹಾಗೂ ಡಿಮಾಂಡ್ ಪ್ರೊನೋಟ್ ಅನ್ನು ಹಿಂತಿರುಗಿಸದ ಬಗ್ಗೆ ನಾನು ಅವರ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಪಿರ್ಯಾದಿ ನನ್ನ ವಿರುದ್ಧ ಸುಳ್ಳು ಪಿರ್ಯಾದನ್ನು ಕೊಟ್ಟಿದ್ದರು ಎಂದು ಹೇಳಲಾದ ಬಗ್ಗೆ ನಾನು ಅವರ ವಿರುದ್ಧ ಯಾವುದೇ ಕಾನೂನು ಕ್ರಮ ಜರುಗಿಸಿರುವುದಿಲ್ಲ. ನಾನು ಪಿರ್ಯಾದಿಗೆ ನಿಪಿ-1 ರಲ್ಲಿರುವ ತಿಳಿಸಿರುವ ಹಣ ನೀಡಲು ಬಾಧ್ಯಸ್ಥ ಎಂದರೆ ಸರಿಯಲ್ಲ. ನಾನು ಪಿರ್ಯಾದಿಯಿಂದ ಪಡೆದ ಸಾಲದ ಹಣ ತೀರಿಸುವ ಬಾಧ್ಯಸ್ಥಿಕೆಯನ್ನ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಕತೆಯನ್ನು ಕಟ್ಟಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**